ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**


ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: [illegible] ದಿನಾಂಕ : DATE: 14/7/20

# ಪದ್ಮನಾಭ ದೇಗುಲ ಹಕ್ಕು ರಾಜಮನೆತನಕ್ಕೆ: ಸುಪ್ರೀಂ

## ಹಕ್ಕು ಕೇರಳ ಸರ್ಕಾರಕ್ಕೆ ನೀಡಿದ್ದ ತೀರ್ಪು ರದ್ದು



ನವದೆಹಲಿ: ತಿರುಪತಿ ತಿಮ್ಮಪ್ಪನಿಗಿಂತಲೂ ಶ್ರೀಮಂತ ದೇಗುಲ ಎಂದು ಹೇಳಲಾದ, 10 ವರ್ಷಗಳ ಹಿಂದೆ 'ಲಕ್ಷಾಂತರ ಕೋಟಿ ರು.' ಮೌಲ್ಯದ ಚಿನ್ನಾಭರಣಗಳು ಬೆಳಕಿಗೆ ಬಂದು ಇಡೀ ದೇಶವನ್ನೇ ಅಚ್ಚರಿಗೆ ತಳ್ಳಿದ್ದ ಕೇರಳದ ತಿರುವನಂತಪುರಂನ ಪದ್ಮನಾಭಸ್ವಾಮಿ ದೇವಾಲಯದ ಒಡೆತನ ತಿರುವಾಂಕೂರು ರಾಜಮನೆತನಕ್ಕೆ ಸೇರಿದ್ದು ಎಂದು ಸುಪ್ರೀಂಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಈ ದೇಗುಲದ ಒಡೆತನ ಕೇರಳ ಸರ್ಕಾರಕ್ಕೆ ಸೇರಿದ್ದು ಎಂಬ ಕೇರಳ ಹೈಕೋರ್ಟ್‌ನ 2011ರ ತೀರ್ಪನ್ನು ಸುಪ್ರೀಂಕೋರ್ಟ್ ಸೋಮವಾರ ರದ್ದುಪಡಿಸಿದೆ.

ದೇಗುಲದ ಆಡಳಿತ ನೋಡಿಕೊಳ್ಳಲು ತಿರುವಾಂಕೂರು ರಾಜಮನೆತನದವರು ಆಡಳಿತಾತ್ಮಕ ಸಮಿತಿ ರಚಿಸಿಕೊಳ್ಳಬಹುದು ಎಂದು ತೀರ್ಪಿನಲ್ಲಿ ಹೇಳಿರುವ ಸುಪ್ರೀಂ ಕೋರ್ಟ್‌ನ ನ್ಯಾ| ಯು.ಯು.ಲಲಿತ್ ಅವರ ಪೀಠ, ಸದ್ಯಕ್ಕೆ ತಿರುವನಂತಪುರಂ ಜಿಲ್ಲಾ ನ್ಯಾಯಾಧೀಶರು ಆ ಸಮಿತಿಗೆ ಮುಖ್ಯಸ್ಥರಾಗಿರಬೇಕು ಎಂದು ಮಧ್ಯಂತರ ಆದೇಶ ನೀಡಿದೆ.

↘ 5

# ಪದ್ಮನಾಭ ದೇಗುಲ ಹಕ್ಕು ರಾಜಮನೆತನಕ್ಕೆ

◄ ಮೊದಲ ಪುಟದಿಂದ

ಅದರೊಂದಿಗೆ ದೇಗುಲದ ಮೇಲಿನ ಹಕ್ಕು ತಿರುವಾಂಕೂರು ರಾಜಮನೆತನದ ಮಾರ್ತಾಂಡ ವರ್ಮ (ಕೊನೆಯ ರಾಜನ ತಮ್ಮ) ಅವರಿಗೆ ಸೇರಿದಂತಾಗಿದೆ. ತೀರ್ಪಿಗೆ ಪ್ರತಿಕ್ರಿಯೆ ನೀಡಿರುವ ಕೇರಳ ಸರ್ಕಾರದ ದೇವಸ್ವಂ ಸಚಿವ ಕಡಕಂಪಳ್ಳಿ ಸುರೇಂದ್ರನ್, ರಾಜ್ಯ ಸರ್ಕಾರ ಈ ತೀರ್ಪನ್ನು ಸ್ವಾಗತಿಸುತ್ತದೆ. ತೀರ್ಪಿನ ಪೂರ್ಣ ಪ್ರತಿಯನ್ನು ಅಧ್ಯಯನ ಮಾಡಿದ ಮೇಲೆ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ. ಇನ್ನು, ನಿರೀಕ್ಷೆಯಂತೆ ತಿರುವಾಂಕೂರು ರಾಜಮನೆತನದವರು ತೀರ್ಪನ್ನು ಸ್ವಾಗತಿಸಿ ಹರ್ಷ ವ್ಯಕ್ತಪಡಿಸಿದ್ದಾರೆ.

**ಹೊಸ ಕಮಿಟಿಗೆ 3 ಜನ ಹಿಂದುಗಳು:** ರಾಜಮನೆತನದವರು ದೇಗುಲದ ಆಡಳಿತ ನೋಡಿಕೊಳ್ಳಲು 3 ಸದಸ್ಯರ ಸಮಿತಿ ರಚಿಸಿಕೊಳ್ಳಬೇಕು. ಆ ಸಮಿತಿಯ 3 ಸದಸ್ಯರೂ ಹಿಂದೂಗಳಾಗಿರಬೇಕು. ಅಲ್ಲಿಯವರೆಗೆ ಜಿಲ್ಲಾ ಜಡ್ಜ್ ನೇತೃತ್ವದ ಮಧ್ಯಂತರ ಸಮಿತಿಯು ದೇಗುಲದ ವ್ಯವಹಾರಗಳನ್ನು ನೋಡಿಕೊಳ್ಳಲಿದೆ ಎಂದು ಸುಪ್ರೀಂಕೋರ್ಟ್ ಹೇಳಿದೆ.

**ನಿಗೂಢ 'ಬಿ' ಕೋಶ ತೆರೆಯೋದಿಲ್ಲ:** ಹಿಂದೆ ಸುಪ್ರೀಂಕೋರ್ಟ್‌ನ ಆದೇಶದ ಮೇರೆಗೆ ಪದ್ಮಾನಭಸ್ವಾಮಿ ದೇವಾಲಯದ ನೆಲಮಾಳಿಗೆಯಲ್ಲಿರುವ ಸಂಪತ್ತು ತುಂಬಿದ ಕೋಣೆಗಳನ್ನು ತೆರೆದು, ಚಿನ್ನಾಭರಣಗಳನ್ನು ಲೆಕ್ಕಹಾಕುವ ಕಾರ್ಯ ಆರಂಭವಾಗಿತ್ತು. ಅದರಂತೆ 'ಎ' ಕೋಶವನ್ನು ತೆರೆದಾಗ ಸಾವಿರಾರು ಕೋಟಿ ರು. ಮೌಲ್ಯದ ಚಿನ್ನಾಭರಣಗಳು ಪತ್ತೆಯಾಗಿದ್ದವು. ನಂತರ 'ಬಿ' ಕೋಶ ತೆರೆಯುವುದರ ವಿರುದ್ಧ ರಾಜಮನೆತನದವರು ಕೋರ್ಟ್‌ಗೆ ಅಹವಾಲು ಸಲ್ಲಿಸಿ, ಅದರಲ್ಲಿ ನಿಗೂಢ ಶಕ್ತಿಯಿದೆ ಎಂದು ವಾದಿಸಿದ್ದರು. ಹೀಗಾಗಿ 2017ರಲ್ಲಿ ಆ ಕೋಶವನ್ನು ತಾನು ಹೇಳುವವರೆಗೆ ತೆರೆಯುವಂತಿಲ್ಲ ಎಂದು ಸುಪ್ರೀಂಕೋರ್ಟ್ ಹೇಳಿತ್ತು. ಸೋಮವಾರದ ತೀರ್ಪಿನಲ್ಲಿ 'ಬಿ' ಕೋಶ ತೆರೆಯುವ ಬಗ್ಗೆ ಏನನ್ನೂ ಹೇಳಿಲ್ಲ. ಹೀಗಾಗಿ ಅದು ನಿಗೂಢವಾಗಿಯೇ ಉಳಿದಿದೆ.

**ಜೇಸುದಾಸ್‌ಗೆ ಪ್ರವೇಶ ಇಲ್ಲ?:** ಖ್ಯಾತ ಗಾಯಕ ಜೇಸುದಾಸ್ ಅವರು ತಮಗೆ ಪದ್ಮನಾಭಸ್ವಾಮಿಯ ದರ್ಶನ ಮಾಡಲು ಅವಕಾಶ ನೀಡಬೇಕೆಂದು 2017ರಲ್ಲಿ ಕೇರಳ ಸರ್ಕಾರವನ್ನು ಕೋರಿದ್ದರು. ಆಗ ದೇವಾಲಯದ ಮೇಲಿನ ಹಕ್ಕು ಕೇರಳ ಹೈಕೋರ್ಟ್‌ನ ಆದೇಶದಂತೆ ಸರ್ಕಾರದ ಬಳಿ ಇದ್ದುದರಿಂದ ಸರ್ಕಾರ ಜೇಸುದಾಸ್‌ಗೆ ಅನುಮತಿ ನೀಡಿತ್ತು. ಆದರೆ, ರಾಜಮನೆತನದವರು ಹಿಂದೂಯೇತರರು ದೇಗುಲ ಪ್ರವೇಶಿಸುವಂತಿಲ್ಲ ಎಂದು ವಿರೋಧಿಸಿದ್ದರು. ನಂತರ ದಿನಾಂಕ ನಿಗದಿಯ ಗೊಂದಲದಿಂದಾಗಿ ಜೇಸುದಾಸ್ ದೇವಾಲಯಕ್ಕೆ ಹೋಗಿರಲಿಲ್ಲ. ಈಗ ಸುಪ್ರೀಂಕೋರ್ಟ್‌ನ ತೀರ್ಪಿನಿಂದ 3 ಹಿಂದೂಗಳ ಸಮಿತಿಯೇ ರಚನೆಯಾಗುವುದರಿಂದ ಜೇಸುದಾಸ್‌ಗೆ ಪ್ರವೇಶಾವಕಾಶ ಸಿಗುವುದು ಅನುಮಾನವಾಗಿದೆ.



ತೀರ್ಪಿನ ಬಳಿಕ ರಾಜಮಾತೆ ಅಶ್ವತಿ ತಿರುನಾಳ್ ಲಕ್ಷ್ಮೀ ಬಾಯಿಯವರಿಂದ ಆನಂದ ಭಾಷ್ಪ.

## ದೇಗುಲ ಏಕೆ ರಾಜಮನೆತನಕ್ಕೆ ಸೇರಿದ್ದು?

ಪದ್ಮನಾಭಸ್ವಾಮಿ ದೇವಾಲಯಕ್ಕೆ ತಿರುವಾಂಕೂರು ರಾಜರು ಹಕ್ಕುದಾರರಾಗಿದ್ದರು ಮತ್ತು ರಾಜನೇ ದೇವಾಲಯದ ಮುಖ್ಯ ಅರ್ಚಕನೂ ಆಗಿದ್ದ. 1947ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದ ಸಮಯದಲ್ಲಿ ರಾಜಾಳ್ವಿಕೆಯ ತಿರುವಾಂಕೂರು ರಾಜ್ಯ ಭಾರತ ಸರ್ಕಾರದಲ್ಲಿ ವಿಲೀನವಾಗಿತ್ತು. ನಂತರದ ವರ್ಷಗಳಲ್ಲಿ ರಾಜನೂ ಮೃತಪಟ್ಟಿದ್ದ. ಹೀಗಾಗಿ ರಾಜನ ಮರಣದೊಂದಿಗೇ ದೇವಾಲಯದ ಮೇಲೆ ರಾಜಮನೆತನಕ್ಕಿದ್ದ ಹಕ್ಕು ಅಂತ್ಯವಾಗಿದ್ದು, ದೇವಾಲಯವು ಸರ್ಕಾರಕ್ಕೆ ಸೇರಿದ್ದು ಎಂದು 2009ರಲ್ಲಿ ಮಾಜಿ ಐಪಿಎಸ್ ಅಧಿಕಾರಿಯೊಬ್ಬರು ಕೋರ್ಟ್‌ಗೆ ಹೋಗಿದ್ದರು. ಆದರೆ, ರಾಜನ ಅಂತ್ಯದೊಂದಿಗೆ ದೇವಾಲಯದ ಮೇಲೆ ಆ ಮನೆತನಕ್ಕಿರುವ ಹಕ್ಕು ಅಂತ್ಯಗೊಳ್ಳುವುದಿಲ್ಲ, ಅದು ರಾಜನ ಉತ್ತರಾಧಿಕಾರಿಗೆ ಸೇರುತ್ತದೆ ಎಂದು ಸುಪ್ರೀಂಕೋರ್ಟ್ ಹೇಳಿದೆ. ಅಲ್ಲದೆ, ಹಿಂದೆ ತಿರುವಾಂಕೂರು ರಾಜ್ಯ ಹಾಗೂ ಕೊಚ್ಚಿ ರಾಜ್ಯವನ್ನು ವಿಲೀನಗೊಳಿಸುವಾಗ ಪದ್ಮನಾಭಸ್ವಾಮಿ ದೇವಾಲಯದ ಮೇಲಿನ ಹಕ್ಕು ತಮ್ಮ ಬಳಿಯೇ ಶಾಶ್ವತವಾಗಿ ಇರಬೇಕೆಂದು ತಿರುವಾಂಕೂರು ರಾಜರು ಸರ್ಕಾರಕ್ಕೆ ಷರತ್ತು ವಿಧಿಸಿದ್ದರು. ಅದನ್ನು ಸರ್ಕಾರ ಒಪ್ಪಿಕೊಂಡು ರಾಜಾಳ್ವಿಕೆಯ ಎರಡು ರಾಜ್ಯಗಳನ್ನು ವಿಲೀನಗೊಳಿಸಿ ಭಾರತ ಸರ್ಕಾರಕ್ಕೆ ಸೇರಿಸಿಕೊಂಡಿತ್ತು. ಆ ಷರತ್ತನ್ನು ಉಲ್ಲಂಘಿಸುವಂತಿಲ್ಲ ಎಂದೂ ಸುಪ್ರೀಂಕೋರ್ಟ್ ತಿಳಿಸಿದೆ.